॥ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾಯ ನಮಃ ॥

# ಶ್ರೀ ಮಹೀಪತಿದಾಸರು (ಕಾಲ ಸುಮಾರು 1611-1681)

ಜಗದ್ಗುರುಂ ಕೃಪಾಸಿಂಧುಂ ಶರಣಾಗತ ವತ್ಸಲಮ್
ಭಕ್ತಮಾನಸ ಸಂಚಾರಂ ಮಹೀಪತಿ ಗುರುಂ ಭಜೆ ।
ಸ್ವಭಕ್ತಾನುಗ್ರಹಾರ್ಥಾಯ ಸಾಮೀಪ್ಯಾತ್ ಧ್ರುವಮಾಗತಾನ್ ।
ಮಹೀಪತಿ ಗುರೂನ್ ವಂದೇ ಸರ್ವವಿದ್ಯಾವಿಶಾರದಾನ್ ॥

## ಶ್ರೀಮಹೀಪತಿರಾಯರ ಕೆಲವು ದೇವರನಾಮಗಳು

ಶ್ರೀ ಹರಿ

1) ರಾಗ-ಬಾಗೇಸರಿ ತಾಳ-ಝುಂಪ

ಹರಿಯೇ ನಮ್ಮ ಪರದೈವ ।ಹರಿಯೇ ತ್ರಿಭುವನ ಕಾವ ।
ಹರಿಯೇ ಇಹಪರನೀವ ಜಗದೊಳಗೆ ॥ಪ॥

ಬಿಟ್ಟು ತಾಯಿತಂದೆಗಳ ನಟ್ಟನಡವಿಗೆ ಪೋಗಿ ।
ಮುಟ್ಟಿ ಭಜಿಸಲಾಗಿ ದಯವಿಟ್ಟು ಬಂದನು ।
ವಿಠ್ಠಲನಚಲಪದವ ಕೊಟ್ಟು ಕಾಯ್ದನಿದಕೇ ।
ಧಿಟ್ಟ ಧ್ರುವರಾಯ ಸಾಕ್ಷಿ ಅಂಬರದಲಿ ॥1॥

ಜರಿದು ನೂಕೆ ದಶಕಂಠ ।ಶರಧಿ ದಾಟಿಬಂದು ।
ಶ್ರೀ ರಘುವರ ಶರಣೆನ್ನಲು ಪತಿಕರಿಸಿದನು ।
ಧರೆಯನುಳ್ಳನಾಕ ಲಂಕಾಪುರದ ಪದವಿಕೊಟ್ಟು ಗಾಯ್ದ ।
ಮೆರೆವ ವಭೀಷಣನು ಸಾಕ್ಷಿ ಮೃತ್ಯುಲೋಕದಿ ॥2॥

ಧರೆಯನಳೆದುಕೊಟ್ಟ ರಂಘ್ರಿವೆರಡಗಿಂದೆ ಮುಚ್ಚಲಾಗಿ ।
ಶರಣ ತೃತಿಯ ಪಾದಕೆ ಶಿರಸನೀಡಲು ।
ಗುರುಮಹೀಪತಿ ಪ್ರಭು ಸುರರಸಮಪದವ ಕೊಟ್ಟು
ಹೊರೆನೆಂದು ಬಲಿಯು ಸಾಕ್ಷಿ ಪಾತಾಳದಲಿ ॥3॥

2)ರಾಗ-ಪೂರ್ವಿ ತಾಳ-ಕೇರವಾ

ದಾಸನಾದೆನಯ್ಯಾ ನಿಮ್ಮ। ಏಸುಜನ್ನಕ್ಕೆ ॥
ವಾಸನೆ ಪೂರಿಸೋ ಶ್ರೀಹರಿ ಎನ್ನ ಜೀವಕ್ಕೆ ॥ಪ॥

ಒಂದು ಮೊದಲಿಗಿಲ್ಲದೆ ಅನೇಕ ಜನ್ಮ ಜನಿಸಿಬಂದು ।
ನೊಂದು ಬೆಂದು ಕಂದಿ ಕಳೆದೆನಯ್ಯಾ ಭಕ್ತವತ್ಸಲಾ ॥1॥

ಮರ್ಮ ತಿಳಿಯಗೊಡದೆ ಎನ್ನ। ಕರ್ಮಪಾಶಾ ಕಟ್ಟಿಕೊರಳ
ನಿರ್ಮಿಸಿ ನಿರ್ಮಿಸಿ ತಂದ್ಯೋ ನಿರ್ಮಲಾನಂದಾತ್ಮನೆ ॥2॥

ತಪ್ಪಿಲ್ಲದೆ ತಪ್ಪು ಹೊರಿಸಿ । ತಪ್ಪಿಸಿಕೊಂಡಾಡಿದಯ್ಯಾ ।
ಒಪ್ಪು ನಿಮಗಿದು ಕಪಟನಾಟಕ ಶ್ರೀ ಕೃಷ್ಣನೆ ॥3॥

ಎನ್ನ ಹೃದಯದೊಳಗಿದ್ದು। ಭಿನ್ನಭೇದ ಮಾಡಿದೆಯ್ಯಾ ।
ಇನ್ನು ಆರಮುಂದೆ ಉಸರಲಾಗದೋ ಶ್ರೀಕಾಂತನೇ ॥4॥

ಹೆಜ್ಜೆವಿಡಿದು ಬಂದನೀಗ । ದಾಸ ಮಹೀಪತಿಗಿನ್ನು ।
ಸಜ್ಜನರಿಗೀವ ಪದವಕೊಟ್ಟು ಕಾಯೋ ಕರುಣನೇ ॥5॥

3) ರಾಗ-ಮಿಶ್ರಪಹಾಡಿ ತಾಳ-ಕಾರವಾ

ದಾಸನಾಗುವೆನು ಹರಿಯೇ ನಿಮ್ಮ ॥ಪ॥

ದಂಡಿಗೆ ಹಿಡಿದು ಊರ್ಧ್ವ । ಪೌಂಡ್ರ ತುಳಸೀಮಾಲೆಯಿಂದಾ
ಪುಂಡಲೀಕ ವರದ ಶ್ರೀ । ಪಾಂಡುರಂಗ ವಿಠಲನೆಂಬಾ ॥1॥

ಲಜ್ಜೆಯಳಿದು ನೃತ್ಯ । ಹೆಜ್ಜೆಗೊಮ್ಮೆ ತೋರಿಸುತ ।

ಗರ್ಜಿಸುತ ಹರಿನಾಮ । ಸಜ್ಜನರ ಒಲಿಸುವಾ ॥2॥

ಹಲವು ಪುಷ್ಪ ತುಲಸಿಯಿಂದಾ । ಗಳಿನಾಂಘ್ರಿಯಪೂಜೆಮಾಡಿ ।
ನಲಿದು ನವವಿಧ ಭಕ್ತಿ। ಕಲೆಗಳಾ ತೋರಿಸುವಾ ॥3॥

ಎನ್ನ ತನುಮನಧನ- । ವನ್ನು ನಿನಗರ್ಪಿಸುತ ।
ಅನ್ಯಯಾರ ಭಜಿಸದೆ । ನಿನ್ನವನೆಂದೆನಿಸುವಾ ॥4॥

ತಂದೆ ಮಹೀಪತಿ ನಿಜ । ನಂದನ ಸಾರಥಿ ನಿನ್ನ।
ಹೊಂದಿದ ಭಕ್ತರ ಪುಣ್ಯ । ಮಂದಿರದಿ ಜನಿಸುವಾ ॥5॥

4) ರಾಗ- ಯಮನಕಲ್ಯಾಣ ತಾಳ -- ಆದಿ

ಎಂಥಾ ಮೋಹನನೇ ನೋಡಮ್ಮಯ್ಯಾ ।
ಸಂತತ ತೃಪ್ತನು ಬಾಲಕನಾದಾ । ಅ-
ನಂತ ಚರಿತೆಯಾ ದೋರುವ ಕೃಷ್ಣ ॥ಪ॥
    ಮೂಡಣ ದೇಶಕೆ ಪಡರಲು ಗೋಪಿಯು ।
    ತಡೆಯದೆ ಧುಮುಧುಮು ಧುಮುಕೆನುತ ।
    ಕಡೆಯಲು ಧುಡುಧುಡು ಧುಡು ನಡೆಯುತ ಬಂದು ।
    ಪಿಡಿದೆನ್ನ ಸೆರಗ ಬೆಣ್ಣೆ ಬೇಡುವಾ ಕೃಷ್ಣ ॥1॥
ಸಮಗೆಳೆಯರ ಸಂಗಡ ಧ್ವನಿವೇಣಿಯ ।
ಉಮಟಿಸುತಲಿ ಧಿಗಿಧಿಗಿಲೆನುತಾ ।
ಧಿಮಿಕಿಟ ಧಿರಕಿಟ ತಿರಕಿಟವೆಂಬೋ।
ಕ್ರಮದಿ ವಾದ್ಯವ ಬಾರಿಸುವಾ ಕೃಷ್ಣ ॥2॥
    ಗುರು ಮಹೀಪತಿಸುತ ಪ್ರಭುವಿನ ಪದರಜ ।
    ದೊರಕದು ಅಜಭವ ಮುಖ್ಯರಿಗೆ ।

ಹರುಷದಿ ತೋಳ್‌ದೊಡೆ ಮೇಲೆ ಓಡಾಡುವಾ ।
ಧರೆಯೊಳು ಯಶೋದೆ ಸುಕೃತವೆಂತೋ ॥3॥

5) ರಾಗ-ಬಿಹಾಗ ತಾಳ-ದೀಪಚಂದಿ

ಓ ಎನ್ನಬಾರದೆ ಹರಿಯೇ ನಾ ಕರೆದರೆ ।
ಓ ಎನ್ನಬಾರದೇ ಹರಿಯೇ ॥ಪ॥

ಶ್ರೀಯರಸನೆ ನೀನೇ ಗತಿಯೆಂದು ಅನ್ಯ । ಉ-
ಪಾಯವನರಿಯದ ಬಾಲಕ ಕರೆದರೆ ॥ಅ.ಪ॥

ಹಾಲವ ಬೇಡುತ ಮೊರೆಯಿಡಲುಪಮನ್ಯು ।
ಬಾಲಗೆ ಧ್ವನಿದೋರಿದಂತೆ ॥
ಚಾಲವರಿದು ಸರೋವರದಲಿ ಕರೆದ । ಶುಂ-
ಡಾಲಗೆ ಧ್ವನಿದೋರಿದಂತೆ ॥
ವೇಳ್ಯಕೆ ಒದಗೆಂದು ರಾತ್ರಿಯಲಿ ಕರೆದ । ಪಾಂ-
ಚಾಲಿಗೆ ಧ್ವನಿದೋರಿದಂತೆ ॥
ಕಾಲಕಾಲಕೆ ಬಂದು ಮೊರೆ ಇಡೆ ಸುರಮುನಿ ।
ಜಾಲಕೆ ಮೈದೋರಿ ಧ್ವನಿದೋರುವಂತೀಗ । ॥1॥

ಝಾವ ಝಾವಕೆ ನಿನ್ನ ಕರೆದ ಯಶೋದೆಗೆ ।
ಆವಾಗ ಧ್ವನಿದೋರಿದಂತೆ ॥
ಗೋವ ಮೇಯಿಸಿ ತೆರಳಲು ಗೊಲ್ಲರೊದರುವ ।
ಭಾವಕೆ ಧ್ವನಿದೋರಿದಂತೆ ॥
ದೇವ ನೀ ಮರೆಯಾಗಿ ಹೊಂಕರಿಸಿ ಒದರುವ ।

ಆವಿಗೆ ಧ್ವನಿದೋರಿದಂತೆ ||
ಕಾವನಯ್ಯನೆ ನಿನ್ನ ನೆನೆದ ಗೊಲ್ಲತೆಯರ|
ಜೀವನ ಹಿತವಾಗಿ ಧ್ವನಿದೋರುವಂತೀಗ ||2||

ಬಂದೊಳಗಕೆ ನಿನ್ನ ಪಾಂಡವರೊದರಲು|
ನಿಂದು ನೀ ಧ್ವನಿದೋರಿದಂತೆ ||
ಇಂದಾದ ಕಲಿಯುಗ ದಾಸರ ಮಾತಿಗೆ |
ಬಂದು ನೀ ಧ್ವನಿದೋರಿದಂತೆ ||
ಕಂದನಳುವ ಧ್ವನಿ ಕೇಳುತ ಜನನಿ | ಆ-
ನಂದದಿ ಧ್ವನಿದೋರಿದಂತೆ ||
ತಂದೆ ಮಹೀಪತಿನಂದನ ಪ್ರಭು |ಗೋ-
ವಿಂದ ಮುಕುಂದೆನ್ನ ಸಲಹೆಂಬ ಮೂಢಗೆ ||3||

ಶ್ರೀಮಹೀಪತಿದಾಸಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ ಅಶ್ವಿನೀ-
ಹಯಗ್ರೀವಾಭಿನ್ನ ಶ್ರೀಮಧ್ವೇಶಾರ್ಪಣಮಸ್ತು ||